# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗದಗ – ವಾಡಿ ರೈಲ್ವೆ ಯೋಜನೆಯ ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಮಂಡಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 111 ರಾರಾಹೆ 2012 ದಿನಾಂಕ : 18.02.2014
2. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 111 ರಾರಾಹೆ 2012 ದಿನಾಂಕ: 29.09.2015, 26.02.2016 ಮತ್ತು 29.03.2016, 15.03.2016, 31.05.2016, 16.09.2016, 06.10.2016, 11.01.2017, 09.03.2017, 13.03.2017 ಮತ್ತು 22.03.2017, 22.03.2017, 23.06.2017, 28.09.2017, 16.01.2018, 06.03.2018, ಮತ್ತು 09.05.2018.
3. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 45 ರಾರಾಹೆ 2018, ದಿನಾಂಕ: 18.06.2018, 23.02.2019, 05.03.2019, 28.08.2019, 28.08.2019, 01.01.2020, 04.02.2020, 04.02.2020, 14.02.2020, 27.03.2020, 15.02.2020, 05.02.2021, 13.07.2021, 12.08.2021.
4. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 08 ರಾರಾಹೆ 2021, ದಿನಾಂಕ: 26.11.2021.
5. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 119 ರಾರಾಹೆ 2021, ದಿನಾಂಕ: 02.12.2021.
6. ವಿಶೇಷ ಜಿಲ್ಲಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯವರ ಪತ್ರ ಸಂಖ್ಯೆ:ಕೆಐಎಡಿಬಿ/ಕೇಂಕ/ಭೂಸ್ವಾ/2500-9/2021-22/6687,ದಿನಾಂಕ:10.03.2022.
7. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 155 ರಾರಾಹೆ 2021(V), ದಿನಾಂಕ: 17.03.2022.
8. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 155 ರಾರಾಹೆ 2021(IX), ದಿನಾಂಕ: 17.03.2022

******

## ಪ್ರಸ್ತಾವನೆ:

1) ಮೇಲೆ ಓದಲಾದ ಕ್ರ.ಸಂ. (1)ರ ಸರ್ಕಾರಿ ಆದೇಶದಲ್ಲಿ ಗದಗ – ವಾಡಿ ಹೊಸ ರೈಲು ಮಾರ್ಗ ಯೋಜನೆಯನ್ನು ರೂ. 1922.14 ಕೋಟಿಗಳ ಅಂದಾಜು ವೆಚ್ಚ ಮತ್ತು ಮುಂದೆ ಆಗಬಹುದಾದ ವೆಚ್ಚ ಹೆಚ್ಚಳವನ್ನು ಶೇ.50:50 ವೆಚ್ಚ ಹಂಚಿಕೆ ಆಧಾರದಡಿ ರೈಲ್ವೆ ಮಂತ್ರಾಲಯ ಹಾಗೂ ರಾಜ್ಯ ಸರ್ಕಾರ ಕೈಗೆತ್ತಿಕೊಳ್ಳಲು ಹಾಗೂ ಯೋಜನೆಗೆ ಅಗತ್ಯವಿರುವ ಭೂಮಿಯನ್ನು ರಾಜ್ಯ ಸರ್ಕಾರವು ಉಚಿತವಾಗಿ ನೀಡಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

2) ಮೇಲೆ ಓದಲಾದ ಕ್ರ.ಸಂ. (2,3,4&5) ರ ಸರ್ಕಾರಿ ಆದೇಶಗಳಲ್ಲಿ ಗದಗ – ವಾಡಿ ಹೊಸ ರೈಲು ಮಾರ್ಗ ಯೋಜನೆಗೆ ಭೂಸ್ವಾಧೀನಪಡಿಸುವ ಸಂಬಂಧ ಒಟ್ಟು ಮೊತ್ತ ರೂ.307,98,32,381/-ಗಳನ್ನು ಕೆಐಎಡಿಬಿ, ಬೆಂಗಳೂರು ಇವರಿಗೆ ಹಾಗೂ ಕಾಮಗಾರಿಯ ವೆಚ್ಚಕ್ಕಾಗಿ ರೂ.160,94,30,000/-ಗಳನ್ನು ನೈರುತ್ಯ ರೈಲ್ವೆ ಇವರಿಗೆ ಹಂತ ಹಂತವಾಗಿ ಬಿಡುಗಡೆ ಮಾಡಲಾಗಿದೆ.

3) ಮೇಲೆ ಓದಲಾದ ಕ್ರ.ಸಂ. (6)ರ ಪತ್ರದಲ್ಲಿ ವಿಶೇಷ ಜಿಲ್ಲಾಧಿಕಾರಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಇವರು ಈ ಯೋಜನೆಗಾಗಿ ಅಂತಿಮ ಅಧಿಸೂಚನೆ ಹೊರಡಿಸಿ ಭೂಪರಿಹಾರದರ ನಿಗದಿಪಡಿಸಿರುವ ಜಮೀನುಗಳ ಪೈಕಿ ಕಲಬುರ್ಗಿ, ಯಾದಗಿರಿ ಮತ್ತು ಕೊಪ್ಪಳ ಜಿಲ್ಲೆಗಳ ವ್ಯಾಪ್ತಿಯಲ್ಲಿನ ಒಟ್ಟು 560-27 ಎಕರೆ- ಜಮೀನಿಗೆ ಹಾಗೂ ರಾಯಚೂರು ಜಿಲ್ಲೆ ವ್ಯಾಪ್ತಿಯಲ್ಲಿನ 1101-15 ಎಕರೆ ಜಮೀನಿಗೆ ಪರಿಹಾರ ಪಾವತಿಸುವ ಸಲುವಗಿ ಒಟ್ಟು ರೂ.196.60 ಕೋಟಿ ಹಾಗೂ ಶೇ.7.5 ರಂತೆ ಮಂಡಳಿಯ ಸೇವಾಶುಲ್ಕ ರೂ.147.74 ಕೋಟಿ ಸೇರಿ ಒಟ್ಟು ರೂ.211.34 ಕೋಟಿ ಅನುದಾನ ಅಗತ್ಯವಿರುತ್ತದೆ ಎಂದು ತಿಳಿಸಿ, ಸದರಿ ಅನುದಾನವನ್ನು ಮಂಡಳಿಗೆ ಕೂಡಲೇ ಬಿಡುಗಡೆ ಮಡುವಂತೆ ಮಾಡುವಂತೆ ಕೋರಿರುತ್ತಾರೆ.

4) ಮೇಲೆ ಓದಲಾದ ಕ್ರ.ಸಂ. (7&8) ರ ಸರ್ಕಾರಿ ಆದೇಶಗಳಲ್ಲಿ ಗದಗ – ವಾಡಿ ಹೊಸ ರೈಲು ಮಾರ್ಗ ಯೋಜನೆಗೆ ಭೂಸ್ವಾಧೀನಪಡಿಸುವ ಸಂಬಂಧ ರೂ.60,00,00,000/-ಗಳನ್ನು ಕೆಐಎಡಿಬಿ, ಬೆಂಗಳೂರು ಇವರಿಗೆ ಹಾಗೂ ಕಾಮಗಾರಿಯ ವೆಚ್ಚಕ್ಕಾಗಿ ರೂ.180,45,00,000/-ಗಳನ್ನು ನೈರುತ್ಯ ರೈಲ್ವೆ ಇವರಿಗೆ ಬಿಡುಗಡೆ ಮಾಡಲಾಗಿದೆ.

5) ವಿಶೇಷ ಜಿಲ್ಲಾಧಿಕಾರಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳ ಇವರು ಮೇಲೆ ಓದಲಾದ ಕ್ರ.ಸಂ.(6)ರ ಪತ್ರದಲ್ಲಿ ಒಟ್ಟು ರೂ.211.34 ಕೋಟಿ ಅನುದಾನವನ್ನು ಒದಗಿಸುವಂತೆ ಕೋರಿದ್ದು, ಈ ಸಂಬಂಧ ರೂ.151.34 ಕೋಟಿಗಳ ಅನುದಾನ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲು ಬಾಕಿ ಇರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ ಮೂಅಇ 31 ರಾರಾಹೆ 2022 (V)**
**ಬೆಂಗಳೂರು, ದಿನಾಂಕ: 17.03.2022**

1) ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗದಗ – ವಾಡಿ ರೈಲ್ವೆ ಮಾರ್ಗದ ಯೋಜನೆಗಾಗಿ ಅಂತಿಮ ಅಧಿಸೂಚನೆ ಹೊರಡಿಸಿ, ಭೂಪರಿಹಾರ ದರ ನಿಗದಿಪಡಿಸಿರುವ ಜಮೀನುಗಳ ಪೈಕಿ ಕಲಬುರ್ಗಿ, ಯಾದಗಿರಿ ಮತ್ತು ಕೊಪ್ಪಳ ಜಿಲ್ಲೆಗಳ ವ್ಯಾಪ್ತಿಯಲ್ಲಿನ ಒಟ್ಟು 560-27 ಎಕರೆ - ಜಮೀನಿಗೆ ಹಾಗೂ ರಾಯಚೂರು ಜಿಲ್ಲೆ ವ್ಯಾಪ್ತಿಯಲ್ಲಿನ 1101-15 ಎಕರೆ ಜಮೀನಿಗೆ ಪರಿಹಾರ ಪಾವತಿಸುವ ಸಲುವಾಗಿ ಒಟ್ಟು ರೂ.60,00,00,448/-ಗಳನ್ನು (ರೂಪಾಯಿ ಅರವತ್ತು ಕೋಟಿ ನಾಲ್ಕು ನೂರ ನಲವತ್ತೆಂಟು ಮಾತ್ರ) ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ಇವರಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

2) ಈ ಮೊತ್ತವನ್ನು 2021-22 ನೇ ಸಾಲಿನಲ್ಲಿ ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ: ಆ.ಇ 610 ಬಿ.ಆರ್.ಎಸ್ 2021, ದಿನಾಂಕ:10.03.2022 ರಲ್ಲಿ ಪುನರ್ ವಿನಿಯೋಗದ ಮೂಲಕ ಒದಗಿಸಿರುವ ಅನುದಾನದ ಮೂಲಕ ಒದಗಿಸಿರುವ ಹೆಚ್ಚುವರಿ ಅನುದಾನದ ಲೆಕ್ಕ ಶೀರ್ಷಿಕೆ "5465-01-190-3-05-132 –ರೈಲ್ವೆ ಯೋಜನೆಗಳ ವೆಚ್ಚ ಹಂಚಿಕೆ - ಬಂಡವಾಳ ವೆಚ್ಚಗಳು" ಇದರಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಭರಿಸತಕ್ಕದ್ದು.

3) ಸದರಿ ಆದೇಶವನ್ನು ಈಗಾಗಲೇ ಗದಗ-ವಾಡಿ ಹೊಸ ರೈಲು ಮಾರ್ಗ ಯೋಜನೆಗೆ ಸಂಬಂಧಿಸಿದಂತೆ **ಇದುವರೆವಿಗೂ ಭೂಸ್ವಾಧೀನಕ್ಕಾಗಿ ಬಿಡುಗಡೆಯಾದ ಅನುದಾನಕ್ಕೆ ಹಣ ಬಳಕೆ ಪ್ರಮಾಣ ಪತ್ರ ಒದಗಿಸುವ ಷರತ್ತಿಗೊಳಪಟ್ಟು** ಆದೇಶಿಸಲಾಗಿದೆ

4) ಈ ಮೊತ್ತವನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರ ಮೇಲುಸಹಿಯೊಂದಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕೆ.ಐ.ಎ.ಡಿ.ಬಿ. ಬೆಂಗಳೂರು ಇವರು Payee's Receipt ಮುಖಾಂತರ ಡ್ರಾ ಮಾಡಲು ಅಧಿಕರಿಸಿದೆ.

5) ಈ ಆದೇಶವನ್ನು ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ: ಆ.ಇ 610 ಬಿ.ಆರ್.ಎಸ್ 2021, ದಿನಾಂಕ:10.03.2022 ರಲ್ಲಿ ಪುನರ್ ವಿನಿಯೋಗದ ಮೂಲಕ ಒದಗಿಸಿರುವ ಹೆಚ್ಚುವರಿ ಅನುದಾನದ ಹಾಗೂ ಸರ್ಕಾರಿ ಆದೇಶ ಸಂಖ್ಯೆ:ಆಇ 01 ಟಿಎಫ್‌ಪಿ 2021, ದಿನಾಂಕ:31.12.2021ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಎನ್.ಕಲಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ.

**ಪ್ರತಿ:**

1. ಪ್ರಧಾನ ಮಹಾಲೇಖಪಾಲರು (ಆಡಿಟ್ – 1, 2, 3/ A & E), ಪ್ರಧಾನ ಮಹಾಲೇಖಪಾಲರ ಕಛೇರಿ (ಕರ್ನಾಟಕ), ಎ.ಎಡಿ. ಸೆಕ್ಷನ್, ಮೈನ್ ಬಿಲ್ಡಿಂಗ್, ಕೆ.ಪಿ.ಎಸ್.ಸಿ. ಕಛೇರಿ ಎದುರು, ಬೆಂಗಳೂರು.
2. ಅಧ್ಯಕ್ಷರು, ರೈಲ್ವೆ ಮಂಡಳಿ, ನವದೆಹಲಿ – 110011.

..3..

3. ಮುಖ್ಯ ಆಡಳಿತಾಧಿಕಾರಿ, (ನಿರ್ಮಾಣ) ನೈರುತ್ಯ ರೈಲ್ವೆ, ನಂ.18, ಮಿಲ್ಲರ್ಸ್ ರಸ್ತೆ, ಬೆಂಗಳೂರು.
4. ವಿಭಾಗಾಧಿಕಾರಿಗಳು, ಬೆಳಗಾಂ ವಿಭಾಗ, ಬೆಳಗಾಂ.
5. ಮುಖ್ಯ ಅಭಿಯಂತರರು (ನಿರ್ಮಾಣ), ನೈರುತ್ಯ ರೈಲ್ವೆ, ಕೇಶವಾಪುರ, ಹುಬ್ಬಳ್ಳಿ.
6. ಆರ್ಥಿಕ ಸಲಹೆಗಾರರು ಹಾಗೂ ಮುಖ್ಯ ಆಡಳಿತಾಧಿಕಾರಿ, ನೈರುತ್ಯ ರೈಲ್ವೆ, ಬೆಂಗಳೂರು.
7. ಜಿಲ್ಲಾಧಿಕಾರಿಗಳು, ಯಾದಗಿರಿ ಜಿಲ್ಲೆ/ ಕಲಬುರಗಿ ಜಿಲ್ಲೆ.
8. ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕೆಐಎಡಿಬಿ, ಬೆಂಗಳೂರು.
9. ಖಜಾನೆ ನಿರ್ದೇಶಕರು, ವಿ.ವಿ ಗೋಪುರ, ಬೆಂಗಳೂರು.
10. ಆಯುಕ್ತರು, ಟಿ. ಎನ್. ಎಂ. ಸಿ., ಖನಿಜ ಭವನ, ಬೆಂಗಳೂರು.
11. ಯೋಜನಾ ನಿರ್ದೇಶಕರು, ಖಜಾನೆ-2, ಗಾಂಧಿನಗರ, ಬೆಂಗಳೂರು.
12. ಮುಖ್ಯ ಅಭಿಯಂತರರು, ಸಂ.ಮತ್ತು ಕ. (ದ), ಲೋಕೋಪಯೋಗಿ ಇಲಾಖೆ, ಕೆ. ಆರ್. ವೃತ್ತ, ಬೆಂಗಳೂರು.
13. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1), ವಿಧಾನಸೌಧ, ಬೆಂಗಳೂರು.
14. ಸರ್ಕಾರದ ಅಧೀನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, (ಕೈ.ಅ) ವಿಕಾಸ ಸೌಧ, ಬೆಂಗಳೂರು.
15. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.
16. ಸರ್ಕಾರದ ಅಪರ ಕಾರ್ಯದರ್ಶಿ (ರೈಲ್ವೆ) ರವರ ಆಪ್ತ ಸಹಾಯಕರು, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.
17. ಸರ್ಕಾರದ ಉಪ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.
18. ನಿರ್ದೇಶಕರು, ಪಿ.ಪಿ.ಪಿ ಕೋಶ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
19. ಶಾಖಾ ರಕ್ಷಾ ಕಡತ / ಬಿಡಿ ಪ್ರತಿಗಳು.